ದಿನಾಂಕಃ 05.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ 10 ನೇ ಪ್ರತಿವಾದಿಯರ ಪರ ಶ್ರೀ. ಎ.ಸಿ.ಡಿ ವಕೀಲರಿಂದಃ**

ದಾವಾ ಆಸ್ತಿಗಳ ಪೈಕಿ ಸರ್ವೆ ನಂಬರ 1098 , ಸರ್ವೆ ನಂಬರ 62, ರಲ್ಲಿಯ 02 ಎಕರೆ 12 ಗುಂಟೆ ಜಮೀನು, ಸರ್ವೆ ನಂಬರ 881/2 ರಲ್ಲಿಯ 22 ಗುಂಟೆ ಜಮೀನು, ಸರ್ವೆ ನಂಬರ- 881/6 ನೇದ್ದರಲ್ಲಿಯ 03 ಎಕರೆ 32 ಗುಂಟೆ ನೇದ್ದವುಗಳನ್ನು 10 ನೇ ಪ್ರತಿವಾದಿಯು ಸನ್ 1982 ರಲ್ಲಿ ಪಾಲು ವಾಟ್ನಿ ಯಾದ ನಂತರ ತನ್ನ ಸ್ವಂತ ಆದಾಯದಿಂದ ಖರೀದಿಸಿರುತ್ತಾನೆಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿ ಸರ್ವೆ ನಂಬರ 1037 ರಲ್ಲಿಯ 18 ಎಕರೆ 20 ಗುಂಟೆ ಜಮೀನು 10 ನೇ ಪ್ರತಿವಾದಿಗೆ ಮೇಲೆ ಹೇಳಿದ ಪಾಲು ವಾಟ್ನಿಯಲ್ಲಿ ಬಂದಿರುತ್ತದೆಂದರೆ ಸಾಕ್ಷಿಯು ಮೋಸದಿಂದ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಮೇಲೆ ಹೇಳಿದ ಆಸ್ತಿಗಳಿಗೆ ಸಂಬಂಧಿಸಿದದಿಂತೆ 10ನೇ ಪ್ರತಿವಾದಿಯನ್ನು ಹೊರತುಪಡಿಸಿ ನಮಗಾಗಲೀ, ಉಳಿದ ಪ್ರತಿವಾದಿಯರಿಗಾಗಲೀ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಅದೇ ರೀತಿ ದಾವಾ ಆಸ್ತಿಗಳ ಪೈಕಿ ಅ.ಕ್ರಮ ಸಂಖ್ಯೆ-13, 31 ರಿಂದ 35 ನೇದ್ದವುಗಳು 10 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಇರುವುದರಿಂದ ಅವುಗಳನ್ನು ತನ್ನ ಹೆಂಡತಿ 11 ನೇ ಪ್ರತಿವಾದಿಯ ಹೆಸರಿಗೆ ದಿ.30.01.2013 ರಂದು ಭಕ್ಷಿಸ ಪತ್ರವನ್ನು ಮಾಡಿಕೊಟ್ಟಿರುತ್ತಾನೆಂದರೆ ಸರಿಯಲ್ಲ. ಆವತ್ತಿನಿಂದ ಇವತ್ತಿನವರೆಗೂ ಸಹ ಸದರಿ ಭಕ್ಷಿಸ ಪತ್ರವನ್ನು ಯಾರೂ ಕೂಡ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಪ್ರಸ್ತುತ ದಾವೆಯಲ್ಲಿ ಪ್ರಶ್ನಿಸಿರುವುದಾಗಿ ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೋಸದಿಂದ ಭಕ್ಷಿಸ ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಆ ಬಗ್ಗೆ ಉಳಿದ ಪ್ರತಿವಾದಿಯರಿಗೆ

ಗೊತ್ತಿರಲಿಲ್ಲ. ಸದರಿ ಭಕ್ಷಿಸ ಪತ್ರ ಆದಾಗಿನಿಂದ 11 ನೇ ಪ್ರತಿವಾದಿ ಸದರಿ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಾ ಬೆಳೆ ಬೆಳೆಯುತ್ತಾ ಬಂದಿರುತ್ತಾಳೆಂದರೆ ಸರಿಯಲ್ಲ.

ಮೃತ ರಮೇಶ ಭೀಮರಾವ ಕೊಪ್ಪ ಇತನು ಮೃತ ಸಂಜೀವಕುಮಾರನಿಗಿಂತ ಚಿಕ್ಕವನು ಎಂದರೆ ನಿಜ. ಸದರಿ ರಮೇಶನು ಸಂಜೀವಕುಮಾರನಿಗಿಂತ ಮುಂಚೆ ತೀರಿಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ರಮೇಶನು ಸನ್ 2003 ರಲ್ಲಿ ತೀರಿಕೊಂಡಿರಬಹುದು.ಸದರಿ ರಮೇಶ ಸನ್ 1996 ರಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸಾಕ್ಷಿಯು ನನಗೆ ನಿಖರವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ರಮೇಶನು ಇನ್ನು ಶಾಲೆಗೆ ಹೋಗುವ ಕಾಲಕ್ಕೆ ತೀರಿಕೊಂಡಿರುತ್ತಾನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತ ಇಂಜನಿಯರ್ ಆಗಿ ಕೆಲಸ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಆ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ಸದರಿ ರಮೇಶ ತೀರಿಕೊಂಡ ಬಗ್ಗೆ ಸನ್ 2002 ರಲ್ಲಿ ದಾಖಲಾಗಿದ್ದು, ಏಕೆ ವಿಳಂಬ ಆಗಿ ದಾಖಲಾಗಿರುತ್ತದೆನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಗಂಡ ಆನಂದನು ತನ್ನ ಹೆಸರಿಗೆ ರಮೇಶನಿಂದ ಖೊಟ್ಟಿ ಮೃತ್ಯುಪತ್ರವನ್ನು ಮಾಡಿಕೊಂಡು ಆತನ ಆಸ್ತಿಗಳನ್ನು ತನ್ನ ಹೆಸರಿಗೆ ದಾಖಲು ಮಾಡಿಕೊಂಡಿರುತ್ತಾನೆಂದರೆ ಸರಿಯಲ್ಲ. ಸದರಿ ಮೃತ್ಯುಪತ್ರ ಸನ್ 1996 ರಿಂದ ಸನ್ 2002 ರವರೆಗೆ ಬೆಳಕಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಖೊಟ್ಟಿ ಮೃತ್ಯುಪತ್ರದ ಆಧಾರದ ಮೇಲೆ ದಾವಾ ಆಸ್ತಿಗಳ ಪೈಕಿ ಅ.ಕ್ರಮ ಸಂಖ್ಯೆ 1 ರಿಂದ 7 ನೇದ್ದವುಗಳಿಗೆ ಸಂಬಂಧಿಸಿದಂತೆ ನನ್ನ ಗಂಡ ಆನಂದನಿಗೆ ಯಾವುದೇ ರೀತಿ ಹಕ್ಕು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ಮೃತ ರಾಯಪ್ಪ ಯಾವಾಗ ತೀರಿಕೊಂಡಿರುತ್ತಾನೆಂದು ನನಗೆ ಹೇಳಲು ಆಗುವುದಿಲ್ಲ. ರಾಯಪ್ಪ ತೀರಿಕೊಳ್ಳುವ ಕಾಲಕ್ಕೆ ಪ್ರತಿವಾದಿ ನಂಬರ 1,ರಿಂದ 3 ಮತ್ತು 7 ರವರು ಮಾತ್ರ ಇದ್ದರು ಎಂದರೆ ಸಾಕ್ಷಿಯು ಎಲ್ಲರೂ ಇದ್ದರು ಎಂದು ನುಡಿಯುತ್ತಾರೆ. ಸದರಿ ರಾಯಪ್ಪ ಮತ್ತು ಆತನ ಹೆಂಡತಿ ಶಿವಕ್ಕ ಗೋಕಾಕ ಫಾಲ್ಸ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಒಕ್ಕಲುತನ ಉದ್ಯೋಗ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆದ್ದರಿಂದ ಅವರಿಗೆ ತಮ್ಮ ಕುಟುಂಬದ ಜೀವನ ನಿರ್ವಹಣೆ ಮಾಡಿಕೊಂಡು ಹೋಗಲು ಕಷ್ಟ ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ಅವರಿಗೆ ಯಾವುದೇ ರೀತಿ ಆಸ್ತಿಯನ್ನು ಖರೀದಿ ಮಾಡುವುದಾಗಲೀ, ಇದ್ದ ಆಸ್ತಿಯನ್ನು ಉಳಿಸಿಕೊಂಡು ಹೋಗುವ ಪರಿಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 1 ನೇ ಪ್ರತಿವಾದಿ ಸದರಿ ರಾಯಪ್ಪ ಮತ್ತು ಶಿವಕ್ಕನ ಹೆಸರಿಗೆ ಆಸ್ತಿಗಳನ್ನು ಖರೀದಿಸಿರುತ್ತಾನೆಂದರೆ ಸರಿಯಲ್ಲ. 1ನೇ ಪ್ರತಿವಾದಿ ತನಗೆ ಆದಾಯ ತೆರಿಗೆಯನ್ನು ಪಾವತಿಸಲು ತೊಂದರೆ ಆಗಬಾರದೆಂಬ ಕಾರಣಕ್ಕಾಗಿ ಸದರೀರವರ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿಸಿರುತ್ತಾನೆಂದರೆ ಸರಿಯಲ್ಲ. ಸದರಿ ರಾಯಪ್ಪ ಮತ್ತು ಶಿವಕ್ಕ ಇಬ್ಬರು ಆಸ್ತಿಗಳನ್ನು ಖರೀದಿಸುವ ಆರ್ಥಿಕ ಸಾಮರ್ಥ್ಯವನ್ನು ಹೊಂದಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

10 ನೇ ಪ್ರತಿವಾದಿಯು ತನ್ನ ಮಾಲದಿನ್ನಿಯಲ್ಲಿರುವ ಜಮೀನ ಸರ್ವೆ ನಂಬರ 1037 ನೇದ್ದನ್ನು 03 ಹಿಸ್ಸೆಗಳಾಗಿ ಅಂದರೆ ಸರ್ವೆ ನಂಬರ 1037/1, ಸರ್ವೆ ನಂಬರ 1037/2, ಸರ್ವೆ ನಂಬರ 1037/3 ಮಾಡಿಕೊಂಡಿರುತ್ತಾನೆಂದರೆ ಸರಿಯಲ್ಲ. ಆ ಪೈಕಿ ಸರ್ವೆ ನಂಬರ 1037/2 ನೇದ್ದು ನನ್ನ ಗಂಡ ಆನಂದನ ಹೆಸರಿಗೆ ಪೋಕಳ ಎಂಟ್ರಿ ಆಗಿರುತ್ತದೆಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ಸದರಿ ಆಸ್ತಿಗೆ ಪ್ರತಿವಾದಿ

ನಂಬರ 1 ಮತ್ತು 2 ನೇದ್ದವರು ವಾರಸಾ ನಾತೆಯಿಂದ ತಮ್ಮ ಹೆಸರುಗಳನ್ನು ದಾಖಲಿಸಿಕೊಂಡಿರುತ್ತಾರೆಂದರೆ ಸಾಕ್ಷಿಯು ಮೋಸದಿಂದ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಅದೆ ರೀತಿ ಸದರಿ ಸರ್ವೆ ನಂಬರ 1037/2 ನೇದ್ದಕ್ಕೆ 9 ನೇ ಪ್ರತಿವಾದಿ ಪ್ರಮೀಳಾರವರ ಹೆಸರು ಸಹ ಪೋಕಳ ಎಂಟ್ರಿಯಾಗಿರುತ್ತದೆಂದರೆ ಸರಿಯಲ್ಲ. ಸದರಿ ಸರ್ವೆ ನಂಬರ 1037 ನೇದ್ದಕ್ಕೆ ಸಂಬಂಧಿಸಿದಂತೆ 10 ನೇ ಪ್ರತಿವಾದಿಯನ್ನು ಹೊರತುಪಡಿಸಿ ನನ್ನ ಗಂಡ ಆನಂದನಿಗಾಗಲೀ, 1, 2 ಮತ್ತು 9 ನೇ ಪ್ರತಿವಾದಿಯರಿಗಾಗಲಿ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಪೈಕಿ ಶೆಡ್ಯೂಲ್ ಬಿ ನೇದ್ದರಲ್ಲಿಯ ಅ. ಕ್ರಮ ಸಂಖ್ಯೆ 3 ಸಿ. ಟಿ.ಎಸ್. ನಂಬರ 1427/ಎ ನೇದ್ದನ್ನು ಪ್ರತಿವಾದಿ ನಂ.1 ಮತ್ತು 2 ರವರು ಜಗದೀಶ ಜಿ. ನಿರ್ವಾಣಿ ಇವರಿಗೆ ಮಾರಾಟ ಮಾಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆದ್ದರಿಂದ ಅವರನ್ನು ಸಹ ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡಿಸುವುದು ಅವ್ಯಕವಾಗಿರುತ್ತದೆಂದರೆ ಸಾಕ್ಷಿಯು ಮಾಡುತ್ತೇನೆಂದು ನುಡಿಯುತ್ತಾರೆ. ಅದೇ ರೀತಿ ದಾವಾ ಆಸ್ತಿ ಪೈಕಿ ಶೆಡ್ಯೂಲ್ ಎ ನೇದ್ದರಲ್ಲಿಯ ನಾಗನೂರು ಗ್ರಾಮದ ಜಮೀನುಗಳಾದ ಅ. ಕ್ರಮ ಸಂಖ್ಯೆ 24, 26 ಮತ್ತು 27 ನೇದ್ದವುಗಳನ್ನು ಸಹ ಪ್ರತಿವಾದಿ ನಂಬರ 1, 2 ಮತ್ತು 7 ನೇದ್ದವರು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಸದರಿ ಜಮೀನುಗಳ ಖರೀದಿದಾರರನ್ನು ಪಕ್ಷಗಾರರನ್ನಾಗಿ ಸೇರಿಸುವ ಅವಶ್ಯಕತೆ ಇರುತ್ತದೆಂದರೆ ಸರಿಯಲ್ಲ.

ಸನ್ 1982 ರಲ್ಲಿ ಆದ ಓ ಎಸ್ ನಂಬರ 18/1982 ರಲ್ಲಿ ಶೆಡ್ಯೂಲ್ ಬಿ ನೇದ್ದರಲ್ಲಿಯ ಅ. ಕ್ರಮ ಸಂಖ್ಯೆ 3 ರಲ್ಲಿಯ ಲಾಜಿಂಗ್ ಮೃತ ನನ್ನ ಗಂಡ ಆನಂದನ ಪಾಲಿಗೆ ಬಂದಿತ್ತು ಎಂದರೆ ಸಾಕ್ಷಿಯು ಸದರಿ ಆಸ್ತಿಯು ನನ್ನ ಗಂಡನ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಪ್ರಸ್ತುತ ಪ್ರಕರಣದಲ್ಲಿ ದಾವಾ ಆಸ್ತಿಯನ್ನಾಗಿ

ಸೇರಿಸಿರುತ್ತೇವೆ. ಸದರಿ ಆಸ್ತಿಯನ್ನು ಪ್ರಸ್ತುತ ಪ್ರಕರಣದಲ್ಲಿ ಸೇರಿಸದೇ ಇರುವುದರಿಂದ ಪ್ರಸ್ತುತ ಪ್ರಕರಣವನ್ನು ಮುಂದುವರೆಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಮೇಲೆ ಹೇಳಿದ ದಾವಯಲ್ಲಿನ ಶೆಡ್ಯೂಲ್ ಇ ಆಸ್ತಿಗಳಾದ ಅ.ಕ್ರಮ ಸಂಖ್ಯೆ -9 ಮತ್ತು 11 ಮುದ್ದತ್ತು ಠೇವಣಿಗಳನ್ನು ಪ್ರಸ್ತುತ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಅವುಗಳನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಮೇಲೆ ಹೇಳಿದಂತೆ ಸನ್ 1982 ರಲ್ಲಿ ಪಾಲು ವಾಟ್ನಿಯಾದ ನಂತರ ಪ್ರತಿವಾದಿ ನಂಬರ 1, 2, 3, 7, 10 ಹಾಗೂ ಮೃತ ನನ್ನ ಗಂಡ ಆನಂದ ಎಲ್ಲರೂ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಾ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಆಸ್ತಿಗಳನ್ನು ಅಡಮಾನ ಮಾಡಿ ಸಾಲ ಪಡೆಯುವುದು, ವ್ಯವಹಾರಗಳನ್ನು ಮಾಡುವುದು ಮಾಡುತ್ತಾ ಬಂದಿರುತ್ತಾರೆಂದರೆ ಸಾಕ್ಷಿಯು ಎಲ್ಲರೂ ಸೇರಿಯೇ ವ್ಯವಹಾರ ಮಾಡಿರುತ್ತಾರೆಂದು ನುಡಿಯುತ್ತಾರೆ. ಆ ರೀತಿ ನಾನು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಗಳೆಲ್ಲವೂ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು , ನಮಗಾಗಲೀ, ಉಳಿದ ಪ್ರತಿವಾದಿಯರಿಗಾಗಲೀ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನಗೆ ಆದಾಯ ತೆರಿಗೆ ತೊಂದರೆ ಆಗುತ್ತದೆಂಬ ಕಾರಣದಿಂದ ಉಳಿದ ಪ್ರತಿವಾದಿಯರ ಹೆಸರಿಗೆ ಆಸ್ತಿಗಳನ್ನು ಖರೀಸುತ್ತಾ ಹೋಗಿರುತ್ತಾರೆಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ಯಾಗಲೀ , ದಾವಾ ಆಸ್ತಿಗಳ ಬಗ್ಗೆಯಾಗಲೀ ನನಗೆ ಯಾವುದೆ ರೀತಿ ಮಾಹಿತಿ ಇರದೇ ಇದ್ದರೂ ಸಹ 10 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ , ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಉಳಿದ ಅಂಶಗಳಿಗೆ ಅಂದರೆ ದಾವಾ ಆಸ್ತಿಗಳ ಸ್ವರೂಪಕ್ಕೆ ಸಂಬಂಧಿಸಿದಂತೆ 3 ನೇ ಪ್ರತಿವಾದಿಯರ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಕೋರಿಕೊಂಡಿರುತ್ತಾರೆ.

**ಪಾಟೀ ಸವಾಲುಃ- 11 ನೇ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ